# ಅಪೂರ್ವ ಅವಕಾಶ

ಅಕ್ಟೋಬರ್ 21ರಂದು ಬಿಎಸ್ಸೆನ್ನೆಲ್‌ನ ಮೊಬೈಲ್ ಸೇವೆಯ ಉದ್ಘಾಟನೆಯೊಂದಿಗೆ ಭಾರತದಲ್ಲಿ ಪೂರ್ಣ ಪ್ರಮಾಣದ ಮೊಬೈಲ್ ಯುದ್ಧವೇ ಪ್ರಾರಂಭವಾಗಿದೆ. ಇದರಿಂದ, ಇದೇ ಮೊದಲ ಬಾರಿಗೆ ದೇಶದಾದ್ಯಂತ ಮೊಬೈಲ್ ಸೇವೆ ಒದಗಿಸಬಲ್ಲ ಸಾಮರ್ಥ್ಯವುಳ್ಳ ಸಂಸ್ಥೆಯೊಂದು ಮೊಬೈಲ್ ಕಣಕ್ಕೆ ಇಳಿದಂತಾಗಿದೆ.

ಸುಮಾರು 2 ವರ್ಷಗಳ ಹಿಂದೆಯೇ ಎಂಟಿಎನ್ನೆಲ್ ಸಂಸ್ಥೆಯು ದೆಹಲಿ ಮತ್ತು ಮುಂಬೈಗಳಲ್ಲಿ ಮೊಬೈಲ್ ಸೇವೆಯನ್ನು ಪ್ರಾರಂಭಿಸಿತಾದರೂ, ದೇಶಾದ್ಯಂತ ಮೊಬೈಲ್ ಸೇವೆ ಒದಗಿಸಬಲ್ಲ ಮೊದಲ ಸರ್ಕಾರಿ ಸಂಸ್ಥೆ ಬಿಎಸ್ಸೆನ್ನೆಲ್ ಆಗಿದೆ. ಕೆಲವೇ ತಿಂಗಳುಗಳ ಹಿಂದೆಯಷ್ಟೇ ಎಲ್ಲ ಪ್ರಮುಖ ನಗರಗಳಲ್ಲಿ ನಾಲ್ಕನೇ ಮೊಬೈಲ್ ಆಪರೇಟರ್‌ಗಳಿಗೆ ಅವಕಾಶ ನೀಡುವುದರೊಂದಿಗೆ ಬಳಕೆದಾರರಿಗೆ ಹೆಚ್ಚಿನ ಆಯ್ಕೆಯ ಸೌಲಭ್ಯ ದೊರೆಯುವಂತಾಯಿತು. ಈಗ ದೇಶಾದ್ಯಂತ ಬಿಎಸ್ಸೆನ್ನೆಲ್‌ನ ಮೂಲಕ ಮೊಬೈಲ್ ಸೇವೆ ದೊರೆಯುವುದರೊಂದಿಗೆ ಗ್ರಾಹಕರಿಗೆ ನಿಜಕ್ಕೂ ಹೆಚ್ಚಿನ ಲಾಭವಾಗಲಿದೆ.

ಆದರೆ, ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ ಸರ್ಕಾರಿ ಸಂಸ್ಥೆಗಳ ಅನುಭವ ಅಷ್ಟೇನೂ ಉತ್ತೇಜನಕಾರಿಯಾಗಿಲ್ಲ. ಉದಾಹರಣೆಗೆ, ಅಗ್ಗದ ದರಗಳು ಮತ್ತು ವ್ಯಾಪಕ ಸೇವಾಜಾಲದ ಸಹಾಯದಿಂದ ಹೆಚ್ಚಿನ ಗ್ರಾಹಕರನ್ನು ಪ್ರಾರಂಭದಲ್ಲಿ ಎಂಟಿಎನ್ನೆಲ್ ಸಂಸ್ಥೆ ಗಳಿಸಿತಾದರೂ ನಿರೀಕ್ಷಿತ ಬೆಳವಣಿಗೆಯನ್ನು ಅದು ದೆಹಲಿ ಮತ್ತು ಮುಂಬೈ ನಗರಗಳಲ್ಲಿ ಕಾಣಲಿಲ್ಲ.

ಸರ್ಕಾರಿ ಸಂಸ್ಥೆಗಳ ಈ ವೈಫಲ್ಯಕ್ಕೆ ಅನೇಕ ಕಾರಣಗಳಿವೆ. ರಾಷ್ಟ್ರೀಕರಣದ ರಕ್ಷಾಕವಚದಡಿಯಲ್ಲಿ ಬೆಳೆದು ಬಂದಿರುವ ಸರ್ಕಾರಿ ಸಂಸ್ಥೆಗಳು, ಇದ್ದಕ್ಕಿದ್ದಂತೆ ಗ್ರಾಹಕ-ಕೇಂದ್ರಿತ ಸೇವೆ ಒದಗಿಸುವುದು ಸುಲಭವಲ್ಲ. ಯಾವುದೇ ಸೇವೆ ಒದಗಿಸಲು ವೈಯಕ್ತಿಕ ಲಾಭ ಇರಲೇಬೇಕೆಂಬ ಸರ್ಕಾರಿ ಸಂಸ್ಥೆಯ ಕೆಲಸಗಾರರ ಮನೋಭಾವ ಅವಕ್ಕೆ ತೊಡಕುಗಳನ್ನುಂಟುಮಾಡುತ್ತಿವೆ. ಇಷ್ಟೇ ಅಲ್ಲದೆ, ಸರ್ಕಾರಿ ಸಂಸ್ಥೆಗಳ ಸಂಭಾವನಾ ಶ್ರೇಣಿಯೂ ಉತ್ತಮ ಸೇವೆಗೆ ಪ್ರೋತ್ಸಾಹಕಾರಿಯಾಗಿಲ್ಲ.

ಅದೇನೇ ಇರಲಿ, ಈ ಮೇಲಿನ ನ್ಯೂನತೆಗಳೇನೂ ಸರಿಪಡಿಸಿಕೊಳ್ಳಲಾರದವೇನೂ ಅಲ್ಲ. ಮೊದಲಿಗೆ ತಮ್ಮ ಕಾರ್ಯವೈಖರಿಯನ್ನು ಬದಲಿಸಿಕೊಂಡು ಗ್ರಾಹಕರ ವಿಶ್ವಾಸ ಗಳಿಸಿದರೆ ಅರ್ಧ ಯುದ್ಧ ಗೆದ್ದಂತೆಯೇ ಸರಿ. ಅದೇ ಸೇವಾ ಮನೋಭಾವವನ್ನು ಮುಂದುವರಿಸಿಕೊಂಡು ಹೋಗುವುದು ಬಿಎಸ್ಸೆನ್ನೆಲ್‌ನ ಮುಂದಿನ ಹೆಜ್ಜೆ.

ಬಿಎಸ್ಸೆನ್ನೆಲ್‌ನಂತಹ ಬೃಹತ್ ಸಂಸ್ಥೆಗಳು ಯಶಸ್ವಿಯಾಗದಿರುವುದಕ್ಕೆ ಇನ್ಯಾವುದೇ ಕಾರಣಗಳಿಲ್ಲ. ಏಕೆಂದರೆ ಅತಿ ದೊಡ್ಡ ದೂರಸಂಪರ್ಕ ಜಾಲ, ನುರಿತ ತಾಂತ್ರಿಕ ವರ್ಗ ಮತ್ತು ಎಲ್ಲಕ್ಕೂ ಮಿಗಿಲಾಗಿ ಸರ್ಕಾರದ ಪೂರ್ಣ ಬೆಂಬಲ ಇನ್ಯಾವುದೇ ಸಂಸ್ಥೆಗೆ ಲಭ್ಯವಿಲ್ಲದ ಸಕಾರಾತ್ಮಕ ಅಂಶಗಳು. ಇದರ ಪೂರ್ಣ ಲಾಭ ಬಿಎಸ್ಸೆನ್ನೆಲ್ ಪಡೆಯಬೇಕಿದೆ.

ಕರ್ನಾಟಕದಲ್ಲಿ ನವೆಂಬರ್ 1ರಿಂದ ಪ್ರಾರಂಭವಾಗಲಿರುವ ಬಿಎಸ್ಸೆನ್ನೆಲ್‌ನ ಸೇವೆಯ ಬಗ್ಗೆ ಸಾಕಷ್ಟು ನಿರೀಕ್ಷೆಗಳಿವೆ. ಬೆಂಗಳೂರು, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಮುಂಚೂಣಿಯಲ್ಲಿದ್ದರೂ ಅದರ ದೂರಸಂಪರ್ಕ ಸೌಕರ್ಯಗಳ ಬಗ್ಗೆ ಇಲ್ಲಿರುವ ಸಂಸ್ಥೆಗಳಿಗೆ ಇನ್ನೂ ತೃಪ್ತಿಯಿಲ್ಲ. ಮೊಬೈಲ್ ಸೇವೆಯ ಯಶಸ್ವಿ ನಿರ್ವಹಣೆಯಿಂದ ಬೆಂಗಳೂರಿನ ದೂರಸಂಪರ್ಕ ವ್ಯವಸ್ಥೆಯನ್ನು ಸರಿಪಡಿಸಬಹುದಾದ ಒಳ್ಳೆಯ ಅವಕಾಶ ಬಿಎಸ್ಸೆನ್ನೆಲ್‌ಗೆ ದೊರೆತಿದೆ. ಇದರ ಪೂರ್ಣ ಲಾಭವನ್ನು ಸಂಸ್ಥೆಯು ಪಡೆಯುತ್ತದೆಯೊ ಅಥವಾ ಇನ್ನಿತರ ಸರ್ಕಾರಿ ಸಂಸ್ಥೆಗಳಂತೆಯೇ ಈ ಅಪೂರ್ವ ಅವಕಾಶವನ್ನು ಕಳೆದುಕೊಳ್ಳುವುದೋ ಕಾದುನೋಡಬೇಕಿದೆ.

ಜಿ.ಪಿ. ವಿನಯಬಾಬು